**ದಿನಾಂಕಃ 08.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಜಿ.ಎಸ್.ಆರ್. ವಕೀಲರಿಂದಃ**

**7.** ನನ್ನ ತಂದೆ ಮತ್ತು ಚಿಕ್ಕಂಪ್ಪಂದಿರಿಗೆ 3 ಜನ ಅಕ್ಕ-ತಂಗಿಯರಿರುತ್ತಾರೆ. ಅವರುಗಳೆಂದರೆ ಹೇಮಾವತಿ, ಪವಿತ್ರ ಮತ್ತು ರುಚಿತಾ . ನನ್ನ ತಂದೆಯ ಅಕ್ಕ-ತಂಗಿಯರು ಜೀವಂತವಾಗಿರುತ್ತಾರೆ. ನನ್ನ ತಂದೆಯ ಅಕ್ಕ-ತಂಗಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನನ್ನ ತಾತ ತೀರಿಕೊಂಡು ಎಷ್ಟು ವರ್ಷಗಳಾಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಮತ್ತು ಚಿಕ್ಕಂಪ್ಪಂದಿರು ಬೇರೆ ಹೋಗಿ 10 ವರ್ಷಗಳಾಗಿರುತ್ತವೆ. ನಿಮ್ಮನ್ನು ಮತ್ತು ನಿಮ್ಮ ಅಕ್ಕ ಗಾಯತ್ರಿಯವರನ್ನು ಬಾಲ್ಯದಿಂದಲೂ ನಿಮ್ಮ ತಂದೆ-ತಾಯಿ ಸಾಕಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಈ ಪ್ರಕರಣ ಹೂಡುವವರೆಗೂ ಸಾಕಿರುತ್ತಾರೆ ನಂತರ ನಾನು ಬೆಂಗಳೂರಿಗೆ ಹೋಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ-ತಾಯಿ ಪ್ರಸ್ತುತ ಕಡಗತ್ತೂರು ಗ್ರಾಮದಲ್ಲಿ ವಾಸವಾಗಿರುತ್ತಾರೆ.

**8.** 1 ನೇ ವಾದಿ ವರ್ಷಕ್ಕೆ ಒಮ್ಮೆ ನನ್ನ ತಂದೆ-ತಾಯಿಯನ್ನು ನೋಡಿಕೊಂಡು ಹೋಗಲು ಬರುತ್ತಾರೆ. ನಾನು ಈ ದಾವೆಯನ್ನು ಹೂಡಿದ ದಿನದಿಂದ ಊರಿಗೆ ಹೋಗಿರುವುದಿಲ್ಲ. ನನ್ನ ಅಕ್ಕನ ವಿದ್ಯಾಭ್ಯಾಸ ಮತ್ತು ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ. ನಾನು ಬೆಂಗಳೂರಿಗೆ ಹೋಗುವವರೆಗೂ ನನ್ನ ತಂದೆಯೇ ನನ್ನ ವಿದ್ಯಾಭ್ಯಾಸ ಮತ್ತು ಕಷ್ಟ-ಸುಖಗಳನ್ನು ನೋಡಿಕೊಂಡಿರುತ್ತಾರೆ ಎಂದರೆ ಸರಿ.

**9.** ಕುಟುಂಬದ ಅವಶ್ಯಕತೆಗಳಿಗಾಗಿ ಮತ್ತು ಬೇರೆ ಕಡೆ ಆಸ್ತಿ ಖರೀದಿ ಮಾಡಲು ದಾವಾ 2 ನೇ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

ಕಡಗತ್ತೂರು ಗ್ರಾಮದಲ್ಲಿ ನಮ್ಮ ತಾತನಿಂದ ನಮಗೆ ಬಂದಿರುವ ಮನೆ ಇರುವುದಿಲ್ಲ, ಆದರೆ ಇದ್ದ ಮನೆಯನ್ನು ಮಾರಾಟ ಮಾಡಿರುತ್ತಾರೆ. ಸದರಿ ಮನೆಯಲ್ಲಿ ಯಾರೂ ಸಹ ವಾಸವಾಗಿರುವುದಿಲ್ಲ. ಸದರಿ ಮನೆಯಲ್ಲಿ 8 ನೇ ಪ್ರತಿವಾದಿ ವಾಸವಾಗಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಮಾರಾಟ ಮಾಡುವ ಪೂರ್ವದಲ್ಲಿ ಸದರಿ ಮನೆಯಲ್ಲಿ ನಾವು ವಾಸವಾಗಿದ್ದು ಮಾರಾಟವಾದ ನಂತರ 8 ನೇ ಪ್ರತಿವಾದಿ ವಾಸವಾಗಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**10.** ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ನನ್ನ ತಂದೆ ಮತ್ತು ತಾಯಿಯ ಹೆಸರಿನಲ್ಲಿ ಬೇರೆ ಆಸ್ತಿಗಳು ಇರುವುದಿಲ್ಲ. ನನ್ನ ತಂದೆ ನಮ್ಮ ಕುಟುಂಬದ ಮುಖ್ಯಸ್ಥರು ಎಂದರೆ ಸರಿ. ನನ್ನ ತಂದೆ ಕುಟುಂಬದ ಮುಖ್ಯಸ್ಥರಾಗಿ ಕುಟುಂಬದ ಅವಶ್ಯಕತೆಗಳಿಗಾಗಿ ಮತ್ತು ನನ್ನ ಮತ್ತು ನನ್ನ ಅಕ್ಕನ ಪಾಲನೆ ಪೋಷಣೆಗಾಗಿ ದಾವಾ 2 ನೇ ಸ್ವತ್ತನ್ನು ಮಾರಾಟ ಮಾಡಿರುವುದರಿಂದ ಸದರಿ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಅಥವಾ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು, ನನ್ನ ಅಕ್ಕ ಮತ್ತು ನನ್ನ ತಂದೆ ಶಾಮೀಲಾಗಿ 8 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ